


بسم اللهِ الرّحمٰن الرّحيم

# ಜಲ್ಸಾ ಸಾಲಾನ ಜರ್ಮನಿ 2023ರ ಅವಲೋಕನ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಜರ್ಮನಿಯ **'ಬೈತುಸ್ಸಬೂಹ್'** ಮಸ್ಜಿದ್‌ನಿಂದ **08-09-2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّالِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಅಲ್ಲಾಹನ ಅಪರಿಮಿತವಾದ ಕೃಪೆ ಮತ್ತು ಔದಾರ್ಯದಿಂದ ಅಹ್ಮದಿಯಾ ಜಮಾಅತ್ ಜರ್ಮನಿಯ ವಾರ್ಷಿಕ ಜಲ್ಸ ಕಳೆದ ವಾರ ವಿಜಯಕರವಾಗಿ ಜರುಗಿತು. ಮೊತ್ತಮೊದಲಾಗಿ ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು. ಅವನು ನಮಗೆ ಒಂದು ವಿರಾಮದ ನಂತರ ವಿಸ್ತಾರವಾದ ಮಟ್ಟದಲ್ಲಿ ಸಾಮಾನ್ಯವಾಗಿ ನಡೆಸುವ ರೀತಿಯಲ್ಲೇ ಜಲ್ಸವನ್ನು ಸಂಘಟಿಸಲು ಸೌಭಾಗ್ಯ ನೀಡಿದನು. ವ್ಯವಸ್ಥಾಪಕರು ಮತ್ತು ಜಲ್ಸದಲ್ಲಿ ಭಾಗವಹಿಸಿದವರು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು.

ಕಾರ್ಯಕರ್ತರು ಕೂಡ ಕೃತಜ್ಞತೆ ಅರ್ಪಿಸಬೇಕು. ಹಝ್ರತ್ ಮಸೀಹ್ ಮೌಊದ್[ಅ]ರ ಅತಿಥಿಗಳ ಸೇವೆ ಮಾಡಲು ನಮಗೆ ಅಲ್ಲಾಹನು ಸೌಭಾಗ್ಯ ನೀಡಿದನು. ಈ ವಿಸ್ತಾರವಾದ ಏರ್ಪಾಡಿನಲ್ಲಿ ಅನೇಕ ಎಡೆಗಳಲ್ಲಿ ಕೊರತೆಗಳು ಉಂಟಾಗಿರಬಹುದು. ಕೆಲವು ಅತಿಥಿಗಳಿಗೂ ಕಷ್ಟತೆಯನ್ನು ಸಹಿಸಬೇಕಾಗಿ ಬಂದಿತ್ತು. ಆದರೆ ಧಾರ್ಮಿಕ ಉದ್ದೇಶಕ್ಕಾಗಿ ಬಂದ ಕಾರಣದಿಂದ ಅವರು ಯಾವುದೇ ದೂರು ನೀಡಲಿಲ್ಲ. ಆದರೆ ಕೆಲವು ಏರ್ಪಾಡುಗಳು ಸರಿಯಿರಲಿಲ್ಲವೆಂದು ನನಗೆ ತಿಳಿದುಬಂದಿದೆ.

ಕಾರ್ಯಕರ್ತರು ಬಹಳ ಪರಿಶ್ರಮದಿಂದ ತಮ್ಮ ಕರ್ತವ್ಯಗಳನ್ನು ನೆರವೇರಿಸಿದ್ದರು. ಅವರಲ್ಲಿ ಅಥವಾ ಅವರ ವಿಭಾಗದಲ್ಲಿ ಏನಾದರೂ ಕೊರತೆಗಳು ಕಂಡುಬಂದಿದ್ದರೆ ಅವುಗಳು ಅವರ ಅಧಿಕಾರಿಗಳಿಂದ ನೀಡಲ್ಪಟ್ಟ ತಪ್ಪು ನಿರ್ದೇಶನಗಳ ಕಾರಣದಿಂದ ಆಗಿದ್ದುವು. ಆದ್ದರಿಂದ ಅತಿಥಿಗಳಿಗೆ ಉಂಟಾಗಿರುವ ತೊಂದರೆಗೆ ಅಧಿಕಾರಿಗಳು ಹೊಣೆಗಾರರಾಗಿರುವರು. ಅವರು ಇಸ್ತಿಗ್ಫಾರ್ ಮಾಡಬೇಕು ಮತ್ತು ಕೊರತೆಗಳನ್ನು ರೆಡ್‌ಬುಕ್‌ನಲ್ಲಿ ಬರೆದುಕೊಂಡು ಇನ್ನು ಮುಂದೆ ಸುಧಾರಣೆ ಮಾಡುವ ಪ್ರಯತ್ನ ಮಾಡಬೇಕು.

ಲಿಫ್ಟ್ ಕೆಲಸ ಮಾಡುತ್ತಿರಲಿಲ್ಲ. ಸ್ನಾನಗೃಹಗಳ ಕೊರತೆಗಳಿದ್ದುವು. ನೀರಿನ ವ್ಯವಸ್ಥೆ ಸರಿಯಿರಲಿಲ್ಲ. ಸೆಕ್ಯೂರಿಟಿಯವರು ವಿನಾ ಕಾರಣ ಅಡಚಣೆಗಳನ್ನು ಹಾಕುತ್ತಿದ್ದರು. ತರ್ಜುಮೆಯಲ್ಲೂ ಅಡಚಣೆ ಉಂಟಾಗಿತ್ತು. ಸೌಂಡ್ ಸಿಸ್ಟಮಿನ ಸಮಸ್ಯೆ ಕೂಡ ಇತ್ತು. ಖುತ್ಬ ಆಲಿಸಲಾಗಲಿಲ್ಲವೆಂದು ಕೆಲವು ಅತಿಥಿಗಳು ದೂರಿದ್ದರು. ಜಲ್ಸದ ವೇಳೆಯಲ್ಲೂ ನಾನು ಈ ಕುರಿತು ವ್ಯವಸ್ಥಾಪಕರಿಗೆ ಹೇಳುತ್ತಿದ್ದೆ. ಜಲ್ಸ ಸಾಲಾನ ಆಫೀಸರ್, ಜಲ್ಸ ಗಾಹ್ ಆಫೀಸರ್ ಮತ್ತು ಸೌಂಡಿನ ವಿಭಾಗದ ಇನ್‌ಚಾರ್ಜ್ ಇದಕ್ಕೆ ಜವಾಬ್ದಾರರು. ಜನರು ಇಲ್ಲಿಗೆ ಜಲ್ಸದ ಕಾರ್ಯಕ್ರಮಗಳನ್ನು ಆಲಿಸಲು ಬರುತ್ತಾರೆ. ಧ್ವನಿಯ ವ್ಯವಸ್ಥೆ ಸರಿಯಿಲ್ಲವೆಂದಾದರೆ ಜಲ್ಸದಿಂದ ಪ್ರಯೋಜನವಾದರೂ ಏನು? ಇತರ ವ್ಯವಸ್ಥೆಗಳಲ್ಲಿರುವ ಕೊರತೆಗಳನ್ನು ಸಹಿಸಬಹುದಾಗಿದೆ. ಆದರೆ ಜಲ್ಸವನ್ನು ಆಲಿಸುವ ವ್ಯವಸ್ಥೆಯಲ್ಲಿ ಯಾವುದೇ ಕೊರತೆಯನ್ನು ಸಹಿಸಲು ಸಾಧ್ಯವಲ್ಲ.

ಇದು ಜನರು ಬಂದು ಒಟ್ಟುಸೇರಲು ನಡೆಸಲಾಗುವ ಯಾವುದೇ ಮೇಳವಲ್ಲವೆಂದು ಹಝ್ರತ್ ಮಸೀಹ್ ಮೌಊದ್[ಅ] ಹೇಳಿರುವರು. ಶಬ್ದ ಕೇಳದೇ ಇರದ ಕಾರಣದಿಂದ ಕೆಲವೆಡೆ ಹಿಂಭಾಗದಲ್ಲಿ ಜಾತ್ರೆಯಂತಹ ಸ್ಥಿತಿಯಾಗಿತ್ತು. ಕನಿಷ್ಠ ಪಕ್ಷ ಏಳೆಂಟು ಸಾವಿರ ಜನರು ಜಲ್ಸವನ್ನು ಸರಿಯಾಗಿ ಆಲಿಸಿರಲಿಲ್ಲವೆಂದು ನನ್ನ ಅಂದಾಜಾಗಿದೆ. ಇದಕ್ಕೆ ಜನರು ಹೊಣೆಗಾರರು ಎಂದು ವ್ಯವಸ್ಥಾಪಕರು ಹೇಳುತ್ತಾರೆ. ಜನರು ಮಾತನಾಡುತ್ತಿದ್ದರು ಎಂದಾದರೆ ಅದು ತರಬೇತಿಯ ಕೊರತೆಯಾಗಿದೆ. ಮಿಶನರಿ ಇನ್‌ಚಾರ್ಜ್ ಮತ್ತು ಮುರಬ್ಬಿಗಳು ಇದಕ್ಕೆ ಜವಾಬ್ದಾರರು. ಅವರು ವರ್ಷ ಪೂರ್ತಿ ಜನರ ತರಬೇತಿ ಏಕೆ ಮಾಡಲಿಲ್ಲ? ಜನರನ್ನು ಆರೋಪಿಸಬೇಡಿರಿ. ತಿಳಿ ಹೇಳಿದರೆ ಸಾಮಾನ್ಯವಾಗಿ ಅಹ್ಮದಿಯರು ಸಕರಾತ್ಮಕವಾಗಿ ಪ್ರತಿಕ್ರಯಿಸುತ್ತಾರೆ. ಈ ಬಾರಿ ಪುರುಷರಿಗೆ ಹೋಲಿಸಿದರೆ ಮಹಿಳೆಯರ ವಿಭಾಗದಲ್ಲಿ ಶಿಸ್ತು ಉತ್ತಮವಾಗಿತ್ತು. ಪುರುಷರ ತರಬೇತಿ ವಿಭಾಗ ಈ ಬಗ್ಗೆ ಚಿಂತಿಸಬೇಕು.

ಪ್ರಗತಿ ಹೊಂದುವ ಸಮುದಾಯಗಳು ತಮ್ಮ ಕೊರತೆಗಳ ಬಗ್ಗೆ ದೃಷ್ಟಿ ಇರಿಸಿದರೆ ಮಾತ್ರ ಯಶಸ್ಸು ಗಳಿಸಬಹುದು. ಎಲ್ಲವೂ ಸರಿಯಾಗಿವೆ ಎಂದು ಹೇಳಿಕೊಂಡು ಅಭಿವೃದ್ಧಿಯ ಮಾರ್ಗವನ್ನು ಮುಚ್ಚಬೇಡಿರಿ. ಇದರಲ್ಲಿ ನಾಚಿಕೆಪಡಬೇಕಾದ ಅಗತ್ಯವಿಲ್ಲ. ಅಧಿಕಾರಿಗಳಿಗೆ ತಮ್ಮ ಸುಧಾರಣೆ ಮಾಡಲು ಅಲ್ಲಾಹನು ಸೌಭಾಗ್ಯ ನೀಡಲಿ. ಈ ಎಲ್ಲ ಕೊರತೆಗಳು ಇದ್ದೂ ನಮ್ಮ ಮೇಲೆ ಅಲ್ಲಾಹನ ಔದಾರ್ಯವಿತ್ತು. ಅವನು ನಮ್ಮ ಕೊರತೆಗಳನ್ನು ಮರೆಮಾಚಿದನು ಮತ್ತು ಸಾಮಾನ್ಯವಾಗಿ ಜಲ್ಸಗಾಗಿ ಆಗಮಿಸಿದ ಅತಿಥಿಗಳು ಬಹಳವಾಗಿ ಪ್ರಭಾವಿತಗೊಂಡಿದ್ದರು. ಅತಿಥಿಗಳು ತಮ್ಮ ಅಸಾಧಾರಣವಾದ ಅನಿಸಿಕೆಗಳನ್ನು ಹೇಳಿದರು. ಈ ಜಲ್ಸದ ಕಾರಣದಿಂದ ಜನರಿಗೆ ಇಸ್ಲಾಮಿನ ನೈಜ ಪಾಠವನ್ನು ನೀಡಲು ಅಲ್ಲಾಹನು ಸೌಭಾಗ್ಯ ನೀಡಿದನು ಎಂಬುದಕ್ಕೆ ಜರ್ಮನಿಯ ಜಮಾಅತ್ ಅಲ್ಲಾಹನಿಗೆ ಬಹಳವಾಗಿ ಕೃತಜ್ಞತೆ ಅರ್ಪಿಸಬೇಕು.

(ಅತಿಥಿಗಳ ಅನಿಸಿಕೆಗಳನ್ನು ಮುಂದಿರಿಸುತ್ತಾ ಹುಝೂರ್ ಹೇಳಿದರು:) ಬಲ್‌ಗೇರಿಯದ ವಕೀಲ್ ಮತ್ತು ಡಾಕ್ಟರೇಟ್ ಆಗಿರುವ ಕ್ರೈಸ್ತ ಮಹಿಳೆಯಾದ ವೀರೋನೀಕ ಸಾಹಿಬ ಹೇಳುತ್ತಾರೆ: ಬಹಳ ಅತ್ಯುತ್ತಮ ಜಲ್ಸವನ್ನು ಜರುಗಿಸಲಾಗಿತ್ತು. ಯಾರ ಮುಖದಲ್ಲೂ ಗಾಬರಿ ಮತ್ತು ಆತಂಕ ಕಾಣುತ್ತಿರಲಿಲ್ಲ. ಈ ಸಮಾರಂಭ ನನ್ನನ್ನು ಆಧ್ಯಾತ್ಮಿಕವಾಗಿ ಸುಸ್ಥಿತಿಗೆ ತಂದಿದೆ. ಬಲ್‌ಗೇರಿಯದ ಕ್ರೈಸ್ತ ಮಹಿಳೆಯಾದ ನತಾಲಿಯ ಹೇಳುತ್ತಾರೆ: ಈ ಜಲ್ಸ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿರುವುದು. ಸಾವಿರಾರು ಮುಸ್ಲಿಮರು ಒಟ್ಟಾಗಿ ಆರಾಧನೆ ಮಾಡುವುದನ್ನು ಮೊದಲ ಬಾರಿಗೆ ನಾನು

ಕಂಡೆ. ಎಲ್ಲ ಜನರೂ ಮುಗುಳ್ನಗುತ್ತಾ ಭೇಟಿಯಾಗುತ್ತಿದ್ದರು. ಖ಼ಲೀಫತುಲ್ ಮಸೀಹ್‌ರ ಭಾಷಣ ಬಹಳ ಪ್ರಭಾವಶಾಲಿಯಾಗಿತ್ತು.

ಮಕ್‌ಡೋನಿಯದ ಓರ್ವ ಕ್ರೈಸ್ತ ಲೇಖಕಿ ಹೇಳುತ್ತಾರೆ: ಜಲ್ಸದ ವ್ಯವಸ್ಥೆ ಬಹಳ ಉನ್ನತ ಮಟ್ಟದ್ದಾಗಿತ್ತು. ವಿವಿಧ ಧರ್ಮಗಳ ಮತ್ತು ಸಮುದಾಯಗಳ ಜನರು ಭಾಗವಹಿಸಿದ ಇಂತಹ ಜಲ್ಸದಲ್ಲಿ ಪಾಲ್ಗೊಳ್ಳುವುದು ನನಗೆ ಬಹಳ ಗೌರವದ ವಿಷಯವಾಗಿದೆ. ಮಕ್‌ಡೋನಿಯದ ಮತ್ತೊಬ್ಬ ಲೇಖಕ ಹೇಳುತ್ತಾರೆ: ವಿವಿಧ ವಿಷಯಗಳಲ್ಲಿ ಖ಼ಲೀಫತುಲ್ ಮಸೀಹ್‌ರ ಭಾಷಣಗಳು ನನ್ನನ್ನು ಬಹಳ ಪ್ರಭಾವಿತಗೊಳಿಸಿತು. ಅನೇಕ ಅಹ್ಮದೀ ಮುಸ್ಲಿಮರೊಡನೆ ಮಾತನಾಡಲು ನನಗೆ ಸಂದರ್ಭ ಲಭಿಸಿತು. ಅವರು ಬಹಳ ಪ್ರೀತಿಯಿಂದ ಮತ್ತು ಮುಗುಳ್ನಗುತ್ತಾ ಮಾತನಾಡುತ್ತಿದ್ದರು. ಎಲ್ಲರೊಡನೆ ಪ್ರೀತಿ, ಯಾರೊಡನೆಯೂ ಹಗೆಯಿಲ್ಲ ಎಂಬುದರ ಕ್ರಿಯಾ ಮಾದರಿಯನ್ನು ನಾನು ನೋಡಿದೆ. ಈ ಆದರ್ಶ ಸೂಕ್ತಿಯಿಂದಲೇ ಲೋಕದಲ್ಲಿ ಶಾಂತಿ ಸ್ಥಾಪನೆಯಾಗುವುದು.

ಸ್ಲೋವಾಕಿಯದ ಅಧ್ಯಾಪಕಿಯಾದ ಮಾರ್ಟಿನ ಸಾಹಿಬ ಎಂಬವರು ಹೇಳುತ್ತಾರೆ: ಅತಿಥಿ ಸತ್ಕಾರದ ಇಂತಹ ಉದಾಹರಣೆ ಎಂದೂ ನೋಡಿರಲಿಲ್ಲ. ಬೈಅತ್ ಮತ್ತು ನಮಾಝಿನ ವೇಳೆ ನನ್ನ ಭಾವನೆಗಳನ್ನು ನನಗೆ ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಸ್ಲೋವಾಕಿಯದ ಮತ್ತೊಬ್ಬ ಅತಿಥಿ ಹೇಳುತ್ತಾರೆ: ಜಲ್ಸಗೆ ಮುಂಚೆ ನನಗೆ ಇಸ್ಲಾಮಿನ ಕುರಿತು ಏನೂ ಗೊತ್ತಿರಲಿಲ್ಲ. ಜಲ್ಸದಲ್ಲಿ ಭಾಗವಹಿಸಿಕೊಂಡು ನನಗೆ ಅಲ್ಲಾಹನ ಮತ್ತು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪದವಿಯ ಅರಿವು ಉಂಟಾಯಿತು. ಅಹ್ಮದಿಯರು ಬಹಳ ಮಗ್ನತೆ ಮತ್ತು ಆವೇಶದಿಂದ ಅತಿಥಿಗಳ ಸೇವೆ ಮಾಡಿದರು. ಸ್ಲೋವಾಕಿಯದ ಮತ್ತೊಬ್ಬ ಅತಿಥಿ ಹೇಳುತ್ತಾರೆ: ಅಹ್ಮದಿಯರ ಸ್ವಭಾವ ಮತ್ತು ಅತಿಥಿ ಸತ್ಕಾರ ನನ್ನನ್ನು ಬಹಳ ಪ್ರಭಾವಿತಗೊಳಿಸಿತು. ಅಹ್ಮದಿಯರು ತಮ್ಮ ಧರ್ಮವನ್ನು ಪಾಲಿಸುವವರಾಗಿರುವರು. ಅಲ್‌ಬೇನಿಯದ ಅತಿಥಿಯಾದ ಒಬ್ಬ ಪ್ರೊಫೆಸ್ಸರ್ ಮತ್ತು ಡಾಕ್ಟರ್ ಸಾಹಿಬ್ ಹೇಳುತ್ತಾರೆ: ಜಲ್ಸ ಬಹಳ ಮಹೋನ್ನತವಾಗಿತ್ತು. ಖ಼ಿಲಾಫತ್ತೇ ನಿಮ್ಮ ಒಗ್ಗಟ್ಟಿಗೆ ಕಾರಣವೆಂದು ಈ ಜಲ್ಸದಲ್ಲಿ ನಾನು ನೋಡಿದೆ.

ಬೋಸ್ನಿಯದ ಇತಿಹಾಸದ ಪ್ರೊಫೆಸರ್ ಹಾರಿಸ್ ಸಾಹಿಬ್ ಹೇಳುತ್ತಾರೆ: ಜಲ್ಸದಲ್ಲಿ ಎಲ್ಲದರ ಏರ್ಪಾಡಿತ್ತು. ಬಹಳ ಉತ್ತಮ ವ್ಯವಸ್ಥೆಯಾಗಿತ್ತು. ಖ಼ಲೀಫತುಲ್ ಮಸೀಹ್‌ರ ಮೊದಲ ಭಾಷಣದಿಂದ ನನ್ನ ಮನಸ್ಸು ಸ್ವಚ್ಛಗೊಂಡಿತು. ಅವರನ್ನು ಭೇಟಿ ಮಾಡಿದ್ದು ನನ್ನ ಮನಸ್ಸಿನ ಮೇಲೆ ಬಹಳ ಉತ್ತಮ ಪ್ರಭಾವವನ್ನು ಉಂಟುಮಾಡಿತು ಮತ್ತು ನನಗೆ ಬಹಳ ನೆಮ್ಮದಿ ಲಭಿಸಿತು. ಬೋಸ್ನಿಯದ ರೆಡ್‌ಕ್ರಾಸ್ ಸೆಕ್ರಟರಿ ಇಂದ್ರ ಹೈದರ್ ಸಾಹಿಬ ಹೇಳುತ್ತಾರೆ: ಖ಼ಲೀಫತುಲ್ ಮಸೀಹ್‌ರನ್ನು ಭೇಟಿ ಮಾಡಿದ್ದು ಬಹಳ ಸಂತೋಷವನ್ನು ನೀಡಿತು. ಪೂರ್ತಿ ಲೋಕದ ಅಹ್ಮದಿಯರನ್ನು ಖ಼ಿಲಾಫತ್ ಒಂದು ದಾರದಲ್ಲಿ ಪೋಣಿಸಿದೆ. ಮುಸ್ಲಿಮಳಾಗಿರುವೆನು ಎಂಬುದರಲ್ಲಿ ನನಗೆ ಅಭಿಮಾನ ಉಂಟಾಯಿತು.

ಜಾರ್ಜಿಯದ ಮಹಿಳೆಯೊಬ್ಬರು ಹೇಳುತ್ತಾರೆ: ಮೊದಲ ಬಾರಿಗೆ ಜಲ್ಸ ನೋಡಲು ಸಾಧ್ಯವಾಯಿತು. ಹಿರಿಯರೂ ಕಿರಿಯರೂ ಪರಿಶ್ರಮಪಟ್ಟು ಕೆಲಸ ಮಾಡುತ್ತಿದ್ದರು. ಜಾಗತಿಕ ಬೈಅತ್ತನ್ನು ನೋಡಿ ಭಾವನೆಗಳನ್ನು ನಿಯಂತ್ರಿಸುವುದು ಕಷ್ಟಕರವಾಗಿತ್ತು. ಜಮಾಅತಿನ ಖ಼ಲೀಫರು ಲೇಖನದ ಜಿಹಾದಿನ ಪರಿಕಲ್ಪನೆಯನ್ನು ನಮ್ಮ ಮುಂದೆ ಇರಿಸಿದರು. ಅದನ್ನು ನಾನು ಶೇಕಡ ನೂರರಷ್ಟು ಸರಿಯೆಂದು ಹೇಳುತ್ತೇನೆ. ಭವಿಷ್ಯದಲ್ಲಿ ಲೋಕವು ಇಸ್ಲಾಮಿನ ಕುರಿತು ಆಲೋಚಿಸುವುದು ಮತ್ತು ಅದರ ಮೂಲಕ ದೇವನನ್ನು ಅರಿಯುವುದು ಎಂದು ನನಗೆ ದೃಢನಂಬಿಕೆಯಿದೆ.

ಜಾರ್ಜಿಯದ ಓರ್ವ ಸುನ್ನಿ ಸ್ಕಾಲರ್ ಹೇಳುತ್ತಾರೆ: ನಾನು ಕ್ರೈಸ್ತ ಧರ್ಮವನ್ನು ಉಪೇಕ್ಷಿಸಿ ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದೆ, ಮದೀನ ಮುನವ್ವರದಲ್ಲಿ ಇದ್ದೆ. ಅಹ್ಮದಿಯರು ನಮ್ಮನ್ನು ಕಾಫಿರ್ ಎನ್ನುತ್ತಾರೆ ಮತ್ತು ಅವರ ವಿಶ್ವಾಸಾದರ್ಶಗಳು ವಿಭಿನ್ನವೆಂದು ನಾನು ಕೇಳಿದ್ದೆ. ಜಲ್ಸದಲ್ಲಿ ಜಮಾಅತ್ತನ್ನು ಬಹಳ ಸಮೀಪದಿಂದ ನೋಡಿದೆ, ಖ಼ಲೀಫತುಲ್ ಮಸೀಹ್‌ರ ಭಾಷಣಗಳನ್ನು ಗಮನವಿಟ್ಟು ಆಲಿಸಿದೆ. ನಿಮ್ಮನ್ನು ಕಾಫಿರ್ ಎಂದು ಹೇಳುವುದು ತಪ್ಪು. ಜಲ್ಸದ ಮೂರು ದಿನಗಳಲ್ಲಿ ನನ್ನ ಎಲ್ಲ ಪ್ರಶ್ನೆಗಳಿಗೆ ಉತ್ತರಗಳು ಲಭಿಸಿದುವು.

ಕೋಸೋವೋದಿಂದ ಆಗಮಿಸಿದ್ದ ಎಜುಕೇಶನ್ ಡೈರೆಕ್ಟರ್ ಹೇಳುತ್ತಾರೆ: ಜಲ್ಸದಲ್ಲಿ ಆಲಿಸಿದ ಭಾಷಣಗಳು ನನ್ನ ಮೆದುಳಿನಲ್ಲಿ ಅಚ್ಚೊತ್ತಿರುವುವು. ಅತಿಥಿ ಸತ್ಕಾರದ ಅನುಭವ ನಮ್ಮ ಹೃದಯಗಳಲ್ಲಿ ಸದಾ ಇರುವುದು. ಕೋಸೋವೋದ ಮೇಯರ್ ಹೇಳುತ್ತಾರೆ: ಈ ಅಸಾಧಾರಣವಾದ ಜಲ್ಸದಲ್ಲಿ ಒಗ್ಗಟ್ಟು ಮತ್ತು ಸಹೋದರತೆಯ ದೃಶ್ಯ ನನ್ನ ಮನಸ್ಸಿನಲ್ಲಿ ಆಳವಾದ ಪ್ರಭಾವವನ್ನು ಉಂಟುಮಾಡಿದೆ. ಖ಼ಲೀಫತುಲ್ ಮಸೀಹ್‌ರ ಭಾಷಣ ಪ್ರಭಾವಶಾಲಿಯಾಗಿತ್ತು. ಅತಿಥಿ ಸತ್ಕಾರ ಅದ್ಭುತಕರವಾಗಿತ್ತು.

ಕೇಮರೂನಿನ ಒಬ್ಬ ಚೀಫ್ ಇಮಾಂ ಸಾಹಿಬ್ ಹೇಳುತ್ತಾರೆ: ಮೊದಲ ಬಾರಿಗೆ ಇಷ್ಟು ದೊಡ್ಡ ಕಾರ್ಯಕ್ರಮದಲ್ಲಿ ಭಾಗವಹಿಸಿರುವೆನು. ವಿಭಿನ್ನ ವರ್ಣಗಳ ಜನರು ಒಂದು ಕುಟುಂಬದ ಹಾಗೆ ಭೇಟಿಯಾಗುತ್ತಿದ್ದರು. ಜಮಾಅತಿನ ಇಮಾಮರ ಭಾಷಣಗಳು ಯುಕ್ತಿಪೂರ್ಣ ಮತ್ತು ಇಸ್ಲಾಮಿನ ಅಧ್ಯಾಪನೆಗಳ ಕನ್ನಡಿಯಾಗಿದ್ದುವು. ನಾವು ಇದರ ಪ್ರಕಾರ ನಡೆದರೆ ಜೀವಿತ ಸ್ವರ್ಗವಾಗುವುದು.

ಇಸ್ಲಾಂ ಧರ್ಮ ತತ್ವಜ್ಞಾನ ಎಂಬ ಗ್ರಂಥವನ್ನು ಸ್ವಇಚ್ಛೆಯಿಂದ ಲತ್‌ವಿಯನ್ ಭಾಷೆಗೆ ತರ್ಜುಮೆ ಮಾಡಿದ್ದ ಲತ್‌ವಿಯದ ಮಹಿಳೆಯೊಬ್ಬರು ಹೇಳುತ್ತಾರೆ: ಜಮಾಅತನ್ನು ಸರಿಯಾಗಿ ತಿಳಿದುಕೊಳ್ಳಲು ನನಗೆ ಜಲ್ಸ ಸಾಲಾನ ಉತ್ತಮ ಸಂದರ್ಭ ಒದಗಿಸಿಕೊಟ್ಟಿತು. ಅಹ್ಮದಿಯಾ ಜಮಾಅತ್ ತನ್ನ ಆದರ್ಶ ಸೂಕ್ತಿಯನ್ನು ಸರಿಯಾದ ರೀತಿಯಲ್ಲಿ ಪಾಲಿಸುತ್ತಿದೆ.

ಜರ್ಮನಿಯಲ್ಲಿ ನೆಲೆಸಿರುವ ತುರ್ಕಿ ಅಧ್ಯಾಪಕಿ ಯಾಸ್ಮೀನ್ ಸಾಹಿಬ ಹೇಳುತ್ತಾರೆ: ಖ಼ಲೀಫತುಲ್ ಮಸೀಹ್‌ರ ಭಾಷಣ ನನ್ನ ಪ್ರಶ್ನೆಗಳ ಉತ್ತರವಾಗಿತ್ತು. ಜಲ್ಸದ ವಾತಾವರಣ ನನಗೆ ಬಹಳ ಇಷ್ಟವಾಯಿತು. ಇಷ್ಟು ಹೆಚ್ಚು ಜನರ ಒಟ್ಟುಸೇರುವುದು ಮತ್ತು ಪ್ರೀತಿಯ ದಾರದಲ್ಲಿ ಪೋಣಿಸಲ್ಪಟ್ಟಿರುವುದು ಒಂದು ಅಸಾಧಾರಣವಾದ ಮತ್ತು ಆಶ್ಚರ್ಯಕರವಾದ ಸಂಗತಿಯಾಗಿದೆ. ಸರ್ಬಿಯದ ಒಬ್ಬ ಜರ್ನಲಿಸ್ಟ್ ಹೇಳುತ್ತಾರೆ: ಜಲ್ಸದಲ್ಲಿ ನಿಮ್ಮ ಉತ್ತಮ ವ್ಯವಸ್ಥೆ ನನ್ನನ್ನು ಆಶ್ಚರ್ಯಗೊಳಿಸಿತು. ಏರ್ಪಾಡಿನಲ್ಲೋ ನಲ್ವತ್ತು ಸಾವಿರು ಜನರಲ್ಲೋ ಯಾವುದೇ ಕೆಡುಕು ಕಂಡು

ಬರಲಿಲ್ಲ. ಸರ್ಬಿಯದ ಜರ್ನಲಿಸ್ಟ್ ಮಹಿಳೆಯೊಬ್ಬರು ಹೇಳುತ್ತಾರೆ: ನನ್ನ ಹೃದಯದಲ್ಲಿ ವ್ಯವಸ್ಥಾಪಕರ ಮತ್ತು ಭಾಗವಹಿಸಿದವರ ಕುರಿತು ಪ್ರೀತಿಯ ಭಾವನೆಗಳು ಇವೆ. ಮಹಿಳೆಯರನ್ನು ಸಂಬೋಧಿಸಿ ಖ಼ಲೀಫ಼ರು ನೀಡಿದ ಭಾಷಣ ನನ್ನನ್ನು ಬಹಳ ಪ್ರಭಾವಿತಗೊಳಿಸಿತು.

ಜರ್ಮನ್ ಕ್ರೈಸ್ತ ಕೆಥೋಲಿಕ್ ಆಗಿರುವ ಒಬ್ಬ ಟಿ.ವಿ. ಚಾನಲ್ ಪ್ರತಿನಿಧಿ ಹೇಳುತ್ತಾರೆ: ಖ಼ಲೀಫ಼ರ ಭಾಷಣ ಪ್ರಭಾವಶಾಲಿಯಾಗಿತ್ತು. ಈ ಭಾಷಣವನ್ನು ಆಲಿಸುವುದು ಮಾತ್ರ ಸಾಕಾಗುವುದಿಲ್ಲ. ಇದರ ಬಗ್ಗೆ ಯೋಚಿಸಬೇಕಾಗಿದೆ.

ಜಲ್ಸದಲ್ಲಿ ಗೌರವಸೂಚಕವಾಗಿ ದುಪ್ಪಟ್ಟವನ್ನು ಹೊದ್ದುಕೊಂಡು ಕುಳಿತುಕೊಂಡಿದ್ದ ಮಹಿಳೆಯೊಬ್ಬರು ಹೇಳುತ್ತಾರೆ: ಭಾಷಣದ ವೇಳೆ ನನ್ನ ಹೃದಯದಲ್ಲಿ ಎಷ್ಟು ಪ್ರಭಾವ ಉಂಟಾಯಿತು ಎಂದರೆ ನನ್ನ ಕಣ್ಣುಗಳೂ ತೇವಗೊಂಡುವು. ಖ಼ಲೀಫ಼ರ ಮಾತುಗಳು ಹೃದಯವನ್ನು ತಟ್ಟುವಂಥದ್ದಾಗಿತ್ತು.

ಜರ್ಮನಿ ಜಲ್ಸದಲ್ಲಿ ಮೀಡಿಯ ಕವರೇಜ್ ಉತ್ತಮವಾಗಿತ್ತು. ನಾಲ್ಕು ಟಿ.ವಿ. ಚಾನಲ್‌ಗಳ ಮೂಲಕ 41 ಮಿಲಿಯನ್ ಜನರಿಗೆ, ಹನ್ನೊಂದು ವಾರ್ತಾಪತ್ರಿಕೆಗಳ ಮೂಲಕ 50 ಮಿಲಿಯನ್ ಜನರಿಗೆ, 5 ರೇಡಿಯೋ ಸ್ಟೇಶನ್‌ಗಳ ಮೂಲಕ 14 ಮಿಲಿಯನ್ ಜನರಿಗೆ ಮತ್ತು ಆನ್‌ಲೈನ್ ಮೂಲಕ 2 ಮಿಲಿಯನ್ ಜನರಿಗೆ ವಾರ್ತೆ ತಲುಪಿತು. ಅವರ ಅಂದಾಜು ಪ್ರಕಾರ ಈ ರೀತಿಯಾಗಿ 108 ಮಿಲಿಯನ್ ಜನರಿಗೆ ಜಲ್ಸದ ಕವರೇಜ್ ತಲುಪಿತು. ಹೇಗಿದ್ದರೂ ಅಲ್ಲಾಹನು ಇದರ ಉತ್ತಮ ಪರಿಣಾಮ ಉಂಟುಮಾಡಲಿ.

ಜನರ ಕೆಲವು ಅನಿಸಿಕೆಗಳನ್ನು ನಾನು ಮುಂದಿರಿಸಿದ್ದೇನೆ. ಅಲ್ಲಾಹನು ತನ್ನ ಔದಾರ್ಯದಿಂದ ನಮ್ಮ ತಪ್ಪುಗಳನ್ನು ಮರೆಮಾಚುತ್ತಾನೆ ಎಂಬುದಕ್ಕೆ ಅವನಿಗೆ ಕೃತಜ್ಞತೆ. ಅನೇಕ ಮಸೀದಿಗಳ ಉದ್ಘಾಟನೆಯ ವೇಳೆಯಲ್ಲೂ ಜನರು ಸಕಾರಾತ್ಮಕ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇಸ್ಲಾಮಿನ ಕುರಿತು ನಮ್ಮ ಅಭಿಪ್ರಾಯ ಬದಲಾಗಿದೆ ಎಂದು ಜನರು ಹೇಳಿದರು. ನಮಗೆ ಪರಿಚಿತರಾದ ಅಹ್ಮದಿಯರು ನಮಗೆ ಇಸ್ಲಾಮಿನ ಸುಂದರ ಅಧ್ಯಾಪನೆಯ ಬಗ್ಗೆ ಮೊದಲು ತಿಳಿಸಿಕೊಡಲಿಲ್ಲವೆಂದು ಅವರು ಆಕ್ಷೇಪ ಕೂಡ ಎತ್ತಿದರು. ಆದ್ದರಿಂದ ಪ್ರತಿಯೊಬ್ಬ ಅಹ್ಮದೀ ಕೀಳರಿಮೆ ಹೊಂದದೇ ಇಸ್ಲಾಮಿನ ಮತ್ತು ಹಝ಼್ರತ್ ಮಸೀಹ್ ಮೌಊದ್(ಅ)ರ ಬಗ್ಗೆ ತಿಳಿಸಿಕೊಡಬೇಕು. ಕರಪತ್ರಗಳ ವಿತರಣೆ ಮಾಡುವುದರಿಂದ ಮಾತ್ರ ಉದ್ದೇಶ ನೆರವೇರುವುದಿಲ್ಲ. ಜನರಿಗೆ ಈಗಲೂ ಧರ್ಮದ ಮಾತುಗಳನ್ನು ಆಲಿಸಲು ಅಭಿರುಚಿಯಿದೆ.

ನಮಗೆ ಪ್ರತಿಯೊಂದು ಜಾಗದಲ್ಲಿ ನಮ್ಮ ಅವಲೋಕನ ನಡೆಸಬೇಕಾದ ಆವಶ್ಯಕತೆಯಿದೆ. ಕೊರತೆಗಳ ಬಗ್ಗೆ ಗಮನಹರಿಸಬೇಕು. ಸುಧಾರಣೆಗೆ ಬೇಕಾದಷ್ಟು ಎಡೆಯಿದೆ. ಅತ್ಯುತ್ತಮವಾದುದನ್ನು ಹುಡುಕುವ ಅಭ್ಯಾಸವನ್ನು ಮುಂದುವರೆಸಬೇಕು. ದುಆ ಮಾಡುತ್ತಾ ಅಲ್ಲಾಹನಿಂದ ಸಹಾಯವನ್ನು ಬೇಡುತ್ತಾ ಕೆಲಸವನ್ನು ಆರಂಭಿಸಬೇಕು. ವ್ಯವಸ್ಥಾಪಕರು ಮತ್ತು ಭಾಗವಹಿಸುವವರು ಸದಾ ಜಲ್ಸದ ಉದ್ದೇಶವನ್ನು ಈಡೇರಿಸಲು ಪರಿಪೂರ್ಣ ಪ್ರಯತ್ನ ನಡೆಸಬೇಕು. ಅಲ್ಲಾಹನು ನಮ್ಮ ಮೇಲೆ ಕೃಪೆದೋರಲಿ ಮತ್ತು ಇನ್ನು ಮುಂದೆಯೂ ಎಲ್ಲರಿಗೂ ಉತ್ತಮ ರೀತಿಯಲ್ಲಿ ಜಲ್ಸದ ಉದ್ದೇಶವನ್ನು ಪೂರೈಸಲು ಸೌಭಾಗ್ಯ ನೀಡಲಿ.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*

*At*, **‘Bait-us-Sabuh’**, *Frankfurt, Germany* On 08-09-2023

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha’at Team for Nazarath Nashr-O-Isha’ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon